**ಸಾಕ್ಷಿಯನ್ನು ದಿಃ 06.02.2021 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ 2 ರಿಂದ 8 ಪರ ಶ್ರೀ ಎಸ್.ಎ.ಎಸ್. ವಕೀಲರಿಂದಃ

ಪುಟ್ಟನಂಜಯ್ಯ ನ ಜೊತೆ ನಾನು ದಿಃ 01.07.2006 ರಂದು ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದು ನಟರಾಜು ಎನ್ನುವವರು ಪುಟ್ಟನಂಜಯ್ಯನವರನ್ನು ನನ್ನ ಬಳಿ ಕರೆದುಕೊಂಡು ಬಂದಿದ್ದರು. ನಾನು ಕ್ರಯದ ಕರಾರು ಪತ್ರವನ್ನು ಬರೆದುಕೊಂಡಾಗ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ಕರಾರು ಪೂರ್ವದಲ್ಲಿ 15 ದಿನಗಳ ಹಿಂದೆ ಮಾತುಕತೆಯಾಗಿದ್ದು ಆ ಸಮಯದಲ್ಲಿ ಪುಟ್ಟರಾಜು, ನಟರಾಜು ಮತ್ತು ಇತರೆ ಕೆಲವರು ಬಂದಿದ್ದರು ಅವರ ಹೆಸರುಗಳು ನೆನಪಿರುವುದಿಲ್ಲ. ಪುಟ್ಟನಂಜಯ್ಯನ ಕಡೆಯಿಂದ ಪಡೆದುಕೊಂಡ ಕೆಲವು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ, ಕೆಲವು ಹಾಜರು ಪಡಿಸಿರುವುದಿಲ್ಲ. ನಿಪಿ. 2 ರಿಂದ 7 ರ ಪೈಕಿ ಒಂದು ಪುಟ್ಟನಂಜಯ್ಯ ನೀಡಿರುವ ಪಹಣಿ ಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಕರಾರು ಪೂರ್ವದಲ್ಲಿ ನಾನು ಪುಟ್ಟನಂಜಯ್ಯನ ಜೊತೆ ನಾನು ಒಂದು ಬಾರಿ ಮಾತ್ರ ಕ್ರಯದ ಬಗ್ಗೆ ಮಾತನಾಡಿರುತ್ತೇನೆ. ಅದೇ ದಿನ ಮಾತುಕತೆ ಮುಗಿದಿರುತ್ತದೆ. ಕರಾರು ಪತ್ರ ಮಾಡುವ ಪೂರ್ವದಲ್ಲಿ ಪುಟ್ಟನಂಜಯ್ಯ ವಂಶವೃಕ್ಷವನ್ನು ಮತ್ತು ಕುಟುಂಬ ಸದಸ್ಯರ ಪ್ರಮಾಣ ಪತ್ರವನ್ನು ನನಗೆ ನೀಡಿರುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೊ ಇಲ್ಲವೋ ಜ್ಞಾಪಕ ಇರುವುದಿಲ್ಲ. ಪ್ರತಿವಾದಿ 3, 5 ಮತ್ತು 7 ಪುಟ್ಟನಂಜಯ್ಯನ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿಯವರು ಬಿಟ್ಟು ಪುಟ್ಟನಂಜಯ್ಯನಿಗೆ ಬೇರೆ ಮಕ್ಕಳು ಇರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಹೆಸರು ಸುರೇಶ್ ಇರುತ್ತದೆ. ಕೆಲವರು ನನ್ನನ್ನು ಸುರೇಶ್ ಭಾರದ್ವಾಜ್ ಎಂದು ಕರೆಯುತ್ತಾರೆ. ಆರ್.ಎಸ್.ಎ 2252/2012 ದಾವೆಯನ್ನು ನಾನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ. ಅದರಲ್ಲಿ ನನ್ನ ಹೆಸರು ಬೆರಳಚ್ಚು ತಪ್ಪಿನಿಂದ ಸುರೇಶ್ ಬದಲು ಸುರೇಶ್

ಭಾರದ್ವಾಜ್ ಎಂದು ನಮೂದಾಗಿರುತ್ತದೆ. ಸದರಿ ಆರ್.ಎಸ್.ಎ ನಲ್ಲಿ ನಾನು ಮಧ್ಯಾಂತರ ಅರ್ಜಿಯನ್ನು ಸಲ್ಲಿಸಿದ್ದೇನು. ಸದರಿ ಮಧ್ಯಂತರ ಅರ್ಜಿಯಲ್ಲಿ ನಾನು ಪುಟ್ಟನಂಜಯ್ಯನ ಇತರೆ ಮಕ್ಕಳಾದ ರಾಜೇಶ್ವರಿ ಅಲಿಯಾಸ್ ಬೇಬಿ, ಕವಿತಾ ರವನ್ನು ಕೂಡ ವಾರಸುದಾರರಾಗಿ ತರಬೇಕೆಂದು ಅರ್ಜಿ ಸಲ್ಲಿಸಿದ್ದೇನು ಎಂದರೆ ಸರಿ. ಸದರಿ ದಾಖಲೆಗಳನ್ನು ಸಾಕ್ಷಿ ಒಪ್ಪಿಕೊಂಡ ಕಾರಣ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ನಿಡಿ. 1 ಎಂದು ಗುರುತಿಸಲಾಯಿತು. ಸದರಿ ಬೇಬಿ ಮತ್ತು ಕವಿತಾ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಕರಾರು ಪತ್ರ ನಮ್ಮ ವಿದ್ಯಾರಣ್ಯ ಪುರದಲ್ಲಿರುವ ಹಳೆ ಕಚೇರಿಯಲ್ಲಿ ಆಗಿರುತ್ತದೆ. ಸದರಿ ಕಚೇರಿಯ ಡೋರ್ ನಂಬರ್ ಅನ್ನು ದಾಖಲೆ ನೋಡದೇ ಹೇಳಲು ಆಗುವುದಿಲ್ಲ. ಸದರಿ ಕರಾರು ಪತ್ರದಲ್ಲಿ ನನ್ನ ಮನೆಯ ವಿಳಾಸ ನಮೂದು ಮಾಡಲಾಗಿರುತ್ತದೆ. ಕಚೇರಿಯ ವಿಳಾಸ ನಮೂದು ಮಾಡಿರುವುದಿಲ್ಲ.

ಪುಟ್ಟನಂಜಯ್ಯ ಮತ್ತು ಆತನ ಮಕ್ಕಳು ವರುಣಾ ಹೋಬಳಿಯ ಚಿಕ್ಕಹಳ್ಳಿ ಗ್ರಾಮದ ವಾಸಿಗಳಿರುತ್ತಾರೆ ಎಂಬ ಬಗ್ಗೆ ದಾಖಲಾತಿಗಳನ್ನು ನಾನು ಪಡೆದುಕೂಂಡಿರುವುದಿಲ್ಲ. ಅವರೆಲ್ಲರೂ ತಂದೆ ಮಕ್ಕಳಾದ ಕಾರಣ ಅವರ ವಿಳಾಸದ ದಾಖಲಾತಿಗಳನ್ನು ನಾನು ಕೇಳಿರುವುದಿಲ್ಲ. ನಾನು ಕರಾರು ಪತ್ರ ಬರೆಸಿಕೊಳ್ಳುವ ಪೂರ್ವದಲ್ಲಿ ವಕೀಲರ ಅಭಿಪ್ರಾಯವನ್ನು ಪಡೆದಿರುವುದಿಲ್ಲ. ಯಾವುದೇ ಸ್ಥಿರ ಆಸ್ತಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ಪತ್ರಿಕಾ ಪ್ರಕಟಣೆ ಮಾಡುವುದು ಮತ್ತು ವಕೀಲರ ಅಭಿಪ್ರಾಯ ಪಡೆಯುವುದು ವಾಡಿಕೆ ಇರುತ್ತದೆ ಎಂದರೆ ಗೊತ್ತಿಲ್ಲ. ಸಾಕ್ಷಿ ಭೂ ದಾಖಲಾತಿಗಳ ಬಗ್ಗೆ ನನಗೆ ಸಾಮಾನ್ಯ ಜ್ಞಾನ ಇರುವ ಕಾರಣ ನಾನು ವಕೀಲರ ಅಭಿಪ್ರಾಯ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

ಕರಾರು ಪತ್ರ ಆದ ಸಮಯದಲ್ಲಿ ಪುಟ್ಟನಂಜಯ್ಯ, ನಟರಾಜ ಮತ್ತು ಪುಟ್ಟನಂಜಯ್ಯನ ಮಕ್ಕಳು ಇದ್ದರು. ಕರಾರು ಪತ್ರದ ಚಾಪಾ ಕಾಗದವನ್ನು ಯಾವಾಗ ಖರೀದಿ ಮಾಡಲಾಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಸಾಕ್ಷಿ ಸ್ವಇಚ್ಛೆಯಿಂದ ಮುಂದುವರೆದು ಕೆಲವೊಮ್ಮೆ ಮುಂಚೆ ಖರೀದಿ ಮಾಡಿರುತ್ತೇನೆ. ಕೆಲವೊಮ್ಮೆ ಅದೇ ದಿನ

ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಕರಾರು ಪತ್ರದ ಒಕ್ಕಣೆಯನ್ನು ನಾನು ಹೇಳಿದಂತೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ. ಸದರಿ ಬೆರಳಚ್ಚುಗಾರರು ಯಾರು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಸದರಿ ಬೆರಳಚ್ಚುಗಾರರ ಸಹಿಯನ್ನು ಕರಾರು ಪತ್ರಕ್ಕೆ ಪಡೆದಿರುವುದಿಲ್ಲ. ಕರಾರು ಪತ್ರದ ಒಂದು ಕರಡು ಪ್ರತಿಯನ್ನು ತೆಗೆದಿರುವುದಿಲ್ಲ. ನಾನು ನೇರವಾಗಿ ಬೆರಳಚ್ಚುಗಾರರಿಗೆ ಉಕ್ತಲೇಖನವನ್ನು ನೀಡಿರುತ್ತೇನೆ. ಪುಟ್ಟನಂಜಯ್ಯ ಸ್ವತ್ತಿಗೆ ಸಂಬಂಧಿಸಿದ ನೊಂದಣಿಗೆ ಬೇಕಾದ ದಾಖಲಾತಿಗಳನ್ನು ಪಡೆಯುವ ಸಲುವಾಗಿ ಮತ್ತು ಕ್ರಯದ ಮೊಬಲಗನ್ನು ಕ್ರೂಡೀಕರಿಸುವ ಸಲುವಾಗಿ 4 ತಿಂಗಳ ಸಮಯ ನಿಗದಿಮಾಡಲಾಗಿತ್ತು. ಭೂ ಮಾಲೀಕರು ತಿಳಿಸಿದ ಮಾಹಿತಿ ಆಧಾರದ ಮೇರೆಗೆ ನಾನು ಕರಾರು ಪತ್ರದ ಚೆಕ್ ಬಂಧಿಗಳನ್ನು ನಮೂದು ಮಾಡಿರುತ್ತೇನೆ. ಕರಾರು ಪತ್ರದ ಚೆಕ್ಬಂಧಿಯಲ್ಲಿ ಜಮೀನಿನ ಯಾವುದೇ ದಿಕ್ಕಿನಲ್ಲೂ ರಸ್ತೆ ಇಲ್ಲ ಎಂದರೆ ಸರಿ. ಸಾಕ್ಷಿ ಸ್ವಇಚ್ಛೆಯಿಂದ ಮುಂದುವರೆದು ಸದರಿ ಜಮೀನಿನ ಸುತ್ತಮುತ್ತಲಿನ ಜಮೀನುಗಳನ್ನು ನಾನೇ ಖರೀದಿಸಿದ ಕಾರಣ ನನಗೆ ದಾವ ಸ್ವತ್ತಿಗೆ ಪ್ರತ್ಯೇಕವಾಗಿ ರಸ್ತೆಗಳ ಅಗತ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. ಕ್ರಯದ ಕರಾರು ಪತ್ರ ಮಾಡಿಕೊಂಡ ಸಮಯದಲ್ಲಿ ನಾನು ಆದಾಯ ತೆರಿಗೆ ಇಲಾಖೆಗೆ ಆದಾಯ ತೆರಿಗೆ ಪಾವತಿ ಮಾಡುತ್ತಿರಲಿಲ್ಲ ಇದಾದ ಕೆಲವು ದಿನಗಳ ನಂತರ ಆದಾಯ ತೆರಿಗೆ ಪಾವತಿ ಮಾಡುತ್ತಾ ಬಂದಿದ್ದೇನೆ. ನನ್ನ ಪಾನ್ ಸಂಖ್ಯೆ ಹೇಳಲು ನೆನಪಿರುವುದಿಲ್ಲ.

ಚಾಮುಂಡೇಶ್ವರಿ ನಗರದಲ್ಲಿ ನನ್ನ ಕಚೇರಿಯು ರಿಯಲ್ ಎಸ್ಟೇಟ್ ಕಚೇರಿ ಎಂದು ನಮೂದಾಗಿತ್ತು. ಅದನ್ನು ನೊಂದಣಿ ಮಾಡಿಸಿರಲಿಲ್ಲ. ನಾನು ಕಾರ್ಪೊರೇಷನ್ ನಿಂದ ಪರವಾನಗಿ ಪಡೆದಿದ್ದೇನು. ಈಗ ಸದರಿ ಪರವಾನಗಿ ನನ್ನ ಬಳಿ ಇರುವುದಿಲ್ಲ. ಚಾಮುಂಡಿಪುರಂ ನಲ್ಲಿ ರಿಯಲ್ ಎಸ್ಟೇಟ್ ಕಚೇರಿಯು 2003 ರಿಂದ 2008 ರವರೆಗೆ ಇತ್ತು. ಸದರಿ ಸವಯದಲ್ಲಿ ಕಚೇರಿ ವ್ಯವಹಾರ ನಡೆಯುತ್ತಿತ್ತು. ನಾನು ಕರಾರು ಪತ್ರ ಬರೆದುಕೂಂಡು ಜಮೀನು ಖರೀದಿಸಿದ ಮೊದಲನೇ ವ್ಯವಹಾರ ಈ ದಾವ ಸ್ವತ್ತಿನ ವ್ಯವಹಾರ ಇರುತ್ತದೆ. 2003-2004 ನೇ ಸಾಲಿನಲ್ಲಿ ನಾನು ಮಧ್ಯವರ್ತಿಯಾಗಿ ಕೆಲಸ

ಮಾಡುತ್ತಿದ್ದೇನೆ. ಭೂಮಿ ಬೇಕು ಎಂಬ ಜನಕ್ಕೆ ಭೂಮಿ ಕೊಡಿಸುವುದು, ಭೂಮಿ ಮಾರಾಟ ಮಾಡುತ್ತಿದ್ದ ವ್ಯಕ್ತಿಗಳಿಗೆ ಮಾರಾಟ ಮಾಡಿಸುತ್ತಿದ್ದೇನೆ. ಸದರಿ ವ್ಯವಹಾರವನ್ನು ನಾನು ಕಮೀಷನ್ ಆಧಾರದ ಮೇಲೆ ಮಾಡುತ್ತಿದ್ದೇನು.

ನಾನು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮೈಸೂರಿನಲ್ಲಿ ಅಸಲು ದಾವ 390/2006 ರಂತೆ ಚಿಕ್ಕಹಳ್ಳಿ ಗ್ರಾಮದ ಜಮೀನಿಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತೇನೆ. ಸಾಕ್ಷಿ ಮುಂದುವರೆದು ಸದರಿ ಜಮೀನು ಕೂಡ ಒಂದೇ ಸಮಯದಲ್ಲಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ದಿಃ 27.06.2005 ಕ್ರಯದ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ಹೂಡಿರುತ್ತೇನೆ ಎಂದರೆ ಸರಿ. ಅದರ ಸರ್ವೆ ನಂ. 68/6 ಇದ್ದು 1 ಎಕರೆ ವಿಸೀರ್ಣ ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನಗೆ ಜಮೀನು ಬೇಕು ಎಂದು ನಾನು ಪ್ರಾರ್ಥನೆ ಮಾಡಿರುತ್ತೇನೆ ಎಂದರೆ ಸರಿ. ಸದರಿ ಜಮೀನು ನನಗೆ ಉಳುಮೆ ಮಾಡಲು ಬೇಕು ಎಂದು ಪ್ರಾರ್ಥಿಸುತ್ತೇನೆ ಎಂದರೆ ಸರಿ. ಸದರಿ ಜಮೀನನ್ನು ದಿಃ 22.12.2006 ರಂದು ನೊಂದಣಿ ಕ್ರಯ ಪತ್ರದ ಮೂಲಕ ಬೇರೆಯವರಿಗೆ ವರ್ಗಾವಣೆ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲಾತಿಗೆ ನಾನು ಸಾಕ್ಷಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ದಿಃ 20.11.2010 ರಂದು ಚಿಕ್ಕಹಳ್ಳಿ ಗ್ರಾಮ ಸರ್ವೆ ನಂ. 38/2 ಬಿ 1 ಎಕರೆ 35 ಗುಂಟೆ ಜಮೀನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನಾನು ಸದರಿ ಕ್ರಯ ಪತ್ರಕ್ಕೆ ಒಪ್ಪಿಗೆ ಸಾಕ್ಷಿ ಹಾಕಿರುತ್ತೇನೆ ಎಂದರೆ ಸರಿ. ಸದರಿ ಜಮೀನಿನ ಬಗ್ಗೆ ಕೂಡ ನಾನು ದಾವೆ ಸಲ್ಲಿಸಿ ನಂತರ ರಾಜಿ ಮಾಡಿಕೊಂಡು ಆನಂತರ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಚಿಕ್ಕಹಳ್ಳಿ ಗ್ರಾಮ ಸರ್ವೆ ನಂ. 71/2 ವಿಸ್ತೀರ್ಣ 1 ಎಕರೆ 34 ಗುಂಟೆ ಸಂಬಂಧಿಸಿದಂತೆ ಅಸಲು ದಾವೆ 476/2006 ದಾವೆಯನ್ನು ನಾನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಜಮೀನನ್ನು ನಾನು ಯಶವಂತ್ ಶಣೈ ಎನ್ನುವವರಿಗೆ ಮೂಲ ಮಾಲೀಕರ ಮುಖಾಂತರ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಚಿಕ್ಕಹಳ್ಳಿ ಗ್ರಾಮ ಸರ್ವೆ ನಂ. 58/2 ಎ ಮತ್ತು 2 ಬಿ ಸಂಬಂಧಿಸಿದಂತೆ ನಾನು ಅಸಲು ದಾವೆ 421/2006 ದಾವೆಯನ್ನು ಸಲ್ಲಿಸಿದ್ದೆ ಎಂದರೆ

ಸರಿ. ನಂತರ ಸದರಿ ಮಾಲೀಕರು ಮುನಿರಾಜು ಬಿನ್ ಗಿಡ್ಡಪ್ಪ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಚಿಕ್ಕಹಳ್ಳಿ ಸರ್ವೇ ನಂ. 32/6 1 ಎಕರೆ 34 ಗುಂಟೆ ಜಮೀನು ಅಸಲು ದಾವೆ ಸಂಖ್ಯೆ 397/2006 ರಂತೆ ದಾವೆಯನ್ನು ಸಲ್ಲಿಸಿದ್ದೆ ಎಂದರೆ ಸರಿ. ನಂತರ ಸದರಿ ಜಮೀನು ಮಹೇಶ್ ಬಿನ್ ಮಾದಪ್ಪ ಎನ್ನುವವರಿಗೆ ಮಾರಾಟ ಆಗಿರುತ್ತದೆ ಎಂದರೆ ಸರಿ. ಸದರಿ ನೊಂದಣಿ ಕ್ರಯಪತ್ರಕ್ಕೆ ನಾನು ಸಾಕ್ಷಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ದಾವ ಸ್ವತ್ತಿನ ಸುತ್ತಲೂ ನಾನು ಜಮೀನನ್ನು ಖರೀದಿಸುವ ಬಗ್ಗೆ ನನ್ನ ಹೆಸರಿನಲ್ಲಿರು ಕ್ರಯಪತ್ರವನ್ನು ಹಾಜರುಪಡಿಸಲು ನನ್ನಿಂದ ಆಗುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.